ಆ) ಬಸ್ ನಿಲ್ದಾಣದ ನಿವೇಶನಗಳನ್ನು ಮಟ್ಟ ಮಾಡುವ ಕೆಲಸ ಹಾಗೂ ಮುಖ್ಯ ಆಡಿಪಾಯಕ್ಕಾಗಿ ಮಣ್ಣು ಅಗೆತದ ಕೆಲಸವು ಪ್ರಗತಿಯಲ್ಲಿರುತ್ತದೆ. ನಿವೇಶನವನ್ನು ಮಟ್ಟ ಮಾಡುವುದಕ್ಕಾಗಿ ರೂ. 3,50,750 ಗಳನ್ನು ಮೆ. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮದವರಿಗೆ ಪಾವತಿಸಲಾಗಿದೆ.

ಶ್ರೀ ಅಶೋಕ್ ಕಾಟ್ಟೆ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹದಿನೆಂಟು ತಿಂಗಳುಗಳಲ್ಲಿ ಸಂಪೂರ್ಣ ಕಾರ್ಯಗತಗೊಳಿಸಲಾಗುವುದೆಂದು ತಿಳಿಸಿದ್ದಾರೆ. ಇವೊತ್ತು ಮೂರೂವರೆ ಲಕ್ಷ ರೂಪಾಯಿಗಳಿಗೆ ಬರೀ ನೆಲವನ್ನು ಸಮತಟ್ಟು ಮಾಡುವುದಕ್ಕೆ ಮಾತ್ರ ಕೆಲಸ ತೆಗೆದುಕೊಂಡಿದ್ದು; ಬೇರೆ ಕೆಲಸವನ್ನು ಯಾವಾಗ ತೆಗೆದುಕೊಳ್ಳಲಾಗುವುದು? ಮತ್ತು ಸಂಪೂರ್ಣವಾಗಿ ಟೆಂಡರ್ ಹಾಕಲು ಯಾವಾಗ ಟೆಂಡರ್ ಅರ್ಜಿಗಳನ್ನು ಕರೆಯಲಾಗುತ್ತದೆ? ಅಲ್ಲದೇ, ಹಿಂದೆ ಒಂದು ಕಂಪನಿಯವರು ಟೆಂಡರ್ ಕೊಟ್ಟಿದ್ದರು, ಅದರ ಬಗ್ಗೆ ಏನಾಯಿತು? ಎಂಬುದನ್ನು ತಿಳಿಸಬೇಕು.

ಶ್ರೀ ಪಿ. ಜೆ. ಆರ್. ಸಿಂಧ್ಯಾ :- ಮಾನ್ಯ ಉಪಾಧ್ಯಕ್ಷರೇ, ಹುಬ್ಬಳ್ಳಿ ನಗರದಲ್ಲಿ ಸುಮಾರು 2 ಕೋಟಿ 25 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ಉತ್ತಮ ಬಸ್ ನಿಲ್ದಾಣವನ್ನು ನಿರ್ಮಿಸಲು ಸ್ಥಳ ಗೊತ್ತುಪಡಿಸಿ ಕೆಲಸವನ್ನು ಹದಿನೆಂಟು ತಿಂಗಳೊಳಗೆ ಮಾಡಿ ಮುಗಿಸಬೇಕೆಂದು ದಿನಾಂಕ 9-5-96 ರಲ್ಲಿ ಗುತ್ತಿಗೆಯನ್ನು ಸಹ ನಿಗದಿಪಡಿಸಿದ್ದೇವೆ. ಬುಲ್ಡೋಜರ್ ಮೂಲಕ ನೆಲವನ್ನು ಸಮತಟ್ಟುಗೊಳಿಸುವ ಕೆಲಸಕ್ಕೆ ಈಗಾಗಲೇ 3,50,750 ಲಕ್ಷ ರೂಪಾಯಿಗಳನ್ನು ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ರವರಿಗೆ ಕೊಟ್ಟಿದ್ದೇವೆ. ಮಳೆಗಾಲವೂ ಸೇರಿಸಿ 18 ತಿಂಗಳೊಳಗೆ ಕೆಲಸ ಮಾಡಬೇಕೆಂಬುದೇ ಸಾರಿಗೆ ಸಂಸ್ಥೆಯ ಉದ್ದೇಶವಾಗಿರುವುದಲ್ಲದೆ ಮತ್ತು ಇದು ಎರಡೂವರೆ ಕೋಟಿ ರೂಪಾಯಿಗಳ ಕೆಲಸವಾಗಿರುವುದರಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಉದ್ದೇಶವಾಗಿರುವುದಲ್ಲದೆ, ಮತ್ತು ಇದು ಎರಡೂವರೆ ಕೋಟಿ ರೂಪಾಯಿಗಳ ಕೆಲಸವಾಗಿರುವುದರಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹಣಕಾಸಿನ ಮುಗ್ಗಟ್ಟಿನಲ್ಲಿದೆ. ವಿಳಂಬ ಮಾಡುವುದರಿಂದ ಕಾಸ್ಟ್ ಆಫ್ ಎಸ್ಕಲೇಶನ್ ಆಗುತ್ತದೆಂಬ ವಿಚಾರ ಕೂಡ ನನಗೆ ಗೊತ್ತಿರುವುದರಿಂದ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಆದಷ್ಟು ಶೀಘ್ರವಾಗಿ ಬಸ್ ನಿಲ್ದಾಣವನ್ನು ಕಟ್ಟಿಕೊಡುವುದಕ್ಕೆ ಪ್ರಯತ್ನಪಡುತ್ತೇನೆ.

ವಿಷಯ :- ಸೂರತ್ಕಲ್ ಕ್ಷೇತ್ರದಲ್ಲಿ ಸರ್ಕಾರಿ ಜಮೀನು ಹಂಚಿಕೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 231(1489)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸುರತ್ಕಲು ಕ್ಷೇತ್ರದ ಅರಸುಲೆ ಪದವಿಯಲ್ಲಿರುವ ಒಟ್ಟು ಸರ್ಕಾರಿ ಜಮೀನು ಎಷ್ಟು ದರ್ಖಾಸ್ತು ಸಮಿತಿ ಹಂಚಿದ ಜಮೀನು ಎಷ್ಟು, ಹಂಚಿಕೆಯಲ್ಲಿ ಪಡೆದವರ ಹೆಸರು ವಿಳಾಸ ಒದಗಿಸುವುದು?

ಆ) ಹಂಚಿಕೆಯಲ್ಲಿ ಲೋಪದೋಷ ಇದೆಯೆಂದಾದರೆ ಆ ಜಮೀನನ್ನು ಬಡ ಜನರಿಗೆ ಹಂಚಿ ದೋಷ ಸರಿಪಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ರಮೇಶ್ ಜಿಗಜಿಣಗಿ (ಕಂದಾಯ ಸಚಿವರು) :-

ಅ) ಒಟ್ಟು 113 ಎಕರೆ ಸರ್ಕಾರಿ ಜಮೀನು ಇರುತ್ತದೆ.

ದರ್ಖಾಸ್ತು ಸಮಿತಿ ಹಂಚಿದ ಜಮೀನಿನ ವಿಸ್ತೀರ್ಣ 26 ಎಕರೆ 26 ಸೆಂಟ್ಸ್.

ಹೆಸರು	ಸ. ನಂ.	ವಿಸ್ತೀರ್ಣ ಎ-ಸೆಂ
1. ಸೋಮಸುಂದರ ಬಿನ್ ರಾಮಚಂದರ	28-1	1-50
2. ಸಪ್ನ ವೈ. ಪೂಂಜ ವೈಫ್ ಆಫ್ ಯತೀಶ ಪೂಂಜ	28-1	2-00
3. ಇನ್ ಇಬ್ರಾಹಿಂ, ಸನ್ ಆಫ್ ಅಬ್ದುಲ್ ಕರೀಂ	28-1	2-00
4. ಸಿಲ್ವೆಸ್ಟರ್ ಪಿಂಟೊ	28-1	1-00
5. ಶ್ಯಾಮಲ ವಿ. ಶೆಟ್ಟಿ	28-1	1-00
6. ಶುಕ್ರ ಮುಖಾರಿ	28-1	1-00
7. ಸೇಸಪ್ಪ ದೇವಾಡಿಗ	207-1	2-00
8. ದಾಕ್ಷಾಯಿಣಿ	207-1	2-00
9. ಎಲಿಜಬೆತ್ ತೌರೊ	16-1	2-52
		ಮತ್ತು 0-95
10. ನಾರಾಯಣ ಪೂಜಾರಿ	16-1	3-16
11. ಸೇಸಪ್ಪ ಪೂಜಾರಿ	16-1	3-90
12. ಜೋಸ್ ಪಾವ್ಲ್ ಪಿಂಟೊ	16-1ಎ	
	-1ಎ3	1-33
13. ಗಿಲ್ಬರ್ಟ್ ಒಸ್ವಿಲ್ಡ್ ಪಿಂಟೊ	16-1ಎ3	1-80
ಒಟ್ಟು		26-26

ಆ) ಹಂಚಿಕೆಯಲ್ಲಿ ಲೋಪದೋಷ ಇರುವುದಿಲ್ಲ. ತನಿಖೆ ನಡೆಸಿ ದರ್ಖಾಸ್ತು ಕಮಿಟಿಯು ಮಂಜೂರು ಮಾಡಿರುತ್ತದೆ.

ಶ್ರೀ ಕುಂಬ್ಳೆ ಸುಂದರರಾವ್ :- ಮಾನ್ಯ ಉಪಾಧ್ಯಕ್ಷರೇ, ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ಕಳುಹಿಸಿರುವ ಉತ್ತರ ಸಮರ್ಪಕವಾಗಿಲ್ಲವೆಂದು ಮೊದಲು ಹೇಳಬಯಸುತ್ತೇನೆ. ನನ್ನ ಪ್ರಶ್ನೆಯೇನೆಂದರೆ, ಸುರತ್ಕಲ್ ಕ್ಷೇತ್ರದ ಆರಾಲಿ ಪದವಿನಲ್ಲಿರುವ ಒಟ್ಟು ಸರ್ಕಾರಿ ಜಮೀನು ಎಷ್ಟು? ದರ್ಖಾಸ್ತು ಸಮಿತಿ ಹಂಚಿದ ಜಮೀನು ಎಷ್ಟು? ಹಂಚಿಕೆಯಲ್ಲಿ ಪಡೆದವರ ಹೆಸರು, ವಿಳಾಸ ಒದಗಿಸುವುದೆಂದು ಕೇಳಿರುವುದಕ್ಕೆ ಉತ್ತರ ಒದಗಿಸಿದ್ದು, ಉತ್ತರದಲ್ಲಿ ಹೆಸರುಗಳನ್ನು ಮಾತ್ರ ತಿಳಿಸಿದ್ದು ವಿಳಾಸಗಳನ್ನು ಕೊಟ್ಟಿರುವುದಿಲ್ಲ. ನಾನು ಇದೇ ಪ್ರಶ್ನೆಯನ್ನು ಕಳೆದ ಬಾರಿಯ ಅಧಿವೇಶನದ ಸಮಯದಲ್ಲಿ ಕೇಳಿದಾಗ ಆಗಲೂ ಇದೇ ರೀತಿ ಹೆಸರುಗಳನ್ನು ಮಾತ್ರ ಒದಗಿಸಿ ವಿಳಾಸಗಳನ್ನು ಒದಗಿಸಿರಲಿಲ್ಲ. ಇದರಿಂದಾಗಿ ಜಮೀನನ್ನು ಯಾರ್ಯಾರಿಗೆ ಕೊಟ್ಟಿದ್ದಾರೆಂಬುದು ಪತ್ತೆಯಾಗುವುದಿಲ್ಲ ಅಲ್ಲದೇ, ಜಮೀನು ಕೊಟ್ಟಿದ್ದರಲ್ಲಿ ಏನಾದರೂ ಲೋಪ-ದೋಷಗಳಾಗಿದ್ದರೆ ಎತ್ತಿಹಿಡಿಯುವುದ ಕ್ಕಾಗುವುದಿಲ್ಲ. ಆ ಕಾರಣಕ್ಕಾಗಿಯೇ ಅವರ ವಿಳಾಸಗಳನ್ನು ಒದಗಿಸಬೇಕೆಂದು ಕೇಳಿದ್ದೇವೆ. ಹಿಂದೆ ನನಗೆ ಯಾವ ಉತ್ತರವನ್ನು ಒದಗಿಸಿದ್ದರೋ ಈಗಲೂ ಸಹ ಜೆರಾಕ್ಸ್ ಪ್ರತಿಯನ್ನು ಕೊಟ್ಟಿದ್ದಾರೆಯೇ ವಿನಾ ಜಮೀನು ಪಡೆದಕೊಂಡವರ ವಿಳಾಸಗಳನ್ನು ಒದಗಿಸಿರುವುದಿಲ್ಲ. ಸರ್ಕಾರದ ಹತ್ತಿರ ಅವರ ವಿಳಾಸಗಳಿಲ್ಲವೇ? ಇದ್ದರೆ, ಏಕೆ ಒದಗಿಸಲಿಲ್ಲ? ಈ ಪ್ರಶ್ನೆಯನ್ನು ನಾನು ಏಕೆ ಕೇಳುತ್ತಿದ್ದೇನೆಂದರೆ, ಜಮೀನನ್ನು ಯಾರಿಗೆ ಹಂಚಿದ್ದಾರೋ ಅವರು ಭೂಹಿತರಲ್ಲ, ಬದಲಾಗಿ ಶ್ರೀಮಂತರಾಗಿದ್ದು, ಅವರುಗಳಿಗೆ ಜಮೀನನ್ನು ಕೊಟ್ಟಿದ್ದಾರೆ. ಜಮೀನು ಹಂಚಿಕೆಯಲ್ಲಿ ಅಕ್ರಮವಾಗಿದ್ದು ದೂರು ಬಂದಿರುವುದರಿಂದ ನಮ್ಮ ಕ್ಷೇತ್ರದಲ್ಲಿ ಇದೊಂದು ದೊಡ್ಡ ಪ್ರಕರಣವಾಗಿದೆ. ಯಾರು ಬಡವರಿದ್ದಾರೋ ಅವರಿಗೆ ಐದು ಸೆಂಟ್‌ಗಳಷ್ಟು ಜಾಗವನ್ನು ಆಶ್ರಯ ಯೋಜನೆಯಡಿ ಕೊಡದೆ ಶ್ರೀಮಂತರಿಗೆ ಎಕರೆಗಟ್ಟಲೆ ಜಮೀನನ್ನು ಕೊಟ್ಟಿದ್ದಾರೆ. ಇದರಲ್ಲಿ ಒಬ್ಬ ರಾಜಕೀಯ ಪುಢಾರಿಯ ಚೇಲ, ಬಾಲ ಯಾರಿದ್ದಾರೋ ಅವರಿಗೆಲ್ಲರಿಗೂ ಜಮೀನು ಕೊಟ್ಟಿದ್ದಾರೆ, ಇದು ಸರಿಯಲ್ಲವಾದ್ದರಿಂದ, ಜಮೀನು ಪಡೆದುಕೊಂಡಿರುವವರ ಹೆಸರು ಮತ್ತು ವಿಳಾಸ ದೊರಕಿದರೆ ನಮಗೂ ತಿಳಿಯುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ರಮೇಶ್ ಸಿ. ಜಿಗಜಣಗಿ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನಗಳಿಗೆ ಒದಗಿಸಿರುವ ಉತ್ತರ ಸರಿಯಾಗಿದೆಯೆಂದು ನನಗನ್ನಿಸುತ್ತದೆ. ಉತ್ತರದಲ್ಲಿ ಜಮೀನು ಪಡೆದುಕೊಂಡವರ ಹೆಸರುಗಳು ಮಾತ್ರವಿದ್ದು ವಿಳಾಸವಿಲ್ಲವೆಂದು ಹೇಳಿರುವುದರಿಂದ, ಇದರಲ್ಲಿ ಮುಚ್ಚುಮರೆ ಏನೂ ಇಲ್ಲವೆಂದು ತಿಳಿಸುತ್ತಾ ಅವರ ವಿಳಾಸಗಳನ್ನು ಒದಗಿಸಿದರೆ ಉತ್ತರದ ಪಟ್ಟಿ ಉದ್ದವಾಗುತ್ತದೆನ್ನುವ ಕಾರಣಕ್ಕಾಗಿ ವಿಳಾಸ ಕೊಟ್ಟಿರಲಿಕ್ಕಿಲ್ಲವೆಂದು ಭಾವಿಸುತ್ತೇನೆ. ಆದರೆ, ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತಿದ್ದೇನೆ. ಅವರು ಕೇಳಿರುವ ಹದಿಮೂರು ಜನ ಫಲಾನುಭವಿಗಳ ವಿಳಾಸಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ. ಎರಡನೆಯದಾಗಿ, ಮಾನ್ಯ ಸದಸ್ಯರು ಮಾತನಾಡುತ್ತಾ ಜಮೀನು ಹಂಚಿಕೆಯಲ್ಲಿ ನಿಯಮಗಳನ್ನು ಉಲ್ಲಂಘಿಸಿ ಶ್ರೀಮಂತರಿಗೆ ವಿತರಿಸಲಾಗಿದೆಯೆಂದು ಹೇಳಿರುವುದರಿಂದ, ನಾನು ಆ ಕುರಿತು ಒಂದು ಮಾತನ್ನು ಹೇಳಬಯಸುತ್ತೇನೆ. ಜಮೀನು ಪಡೆದುಕೊಂಡಿರುವ ಹದಿಮೂರು

ಫಲಾನುಭವಿಗಳಲ್ಲಿ ಈಗಾಗಲೇ ಯಾರಿಗಾದರೂ ಜಮೀನಿದ್ದರೆ, ಅದರ ಬಗ್ಗೆ ವಿವರವಾದ ತನಿಖೆ ಮಾಡಲು ನಮ್ಮ ಇಲಾಖೆಯಿಂದ ಒಬ್ಬ ಅಧಿಕಾರಿಯನ್ನು ಕಳುಹಿಸಿ ಕಾನೂನಿನ ಚೌಕಟ್ಟಿನಲ್ಲಿ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ನಾನು ತೆಗೆದುಕೊಳ್ಳುವುದಾಗಿ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ.

ಶ್ರೀ ಕುಂಬ್ಳೆ ಸುಂದರರಾವ್ :- ಮಾನ್ಯ ಮಂತ್ರಿಗಳನ್ನು ಈ ವಿಚಾರದಲ್ಲಿ ನಂಬುತ್ತೇನೆ. ಈ ಅಕ್ರಮ ನಡೆದು ಬಹಳ ದಿವಸಗಳಾಗಿದ್ದರೂ ಇಲ್ಲಿಯವರೆವಿಗೂ ಯಾರೂ ಕೂಡ ಕ್ರಮ ತೆಗೆದುಕೊಂಡಿಲ್ಲ. ತಾವು ಈಗ ಕಂದಾಯ ಸಚಿವರಾಗಿ ಅಧಿಕಾರ ವಹಿಸಿಕೊಂಡಿರುವುದರಿಂದ ಇದರಲ್ಲಿ ನಿಮ್ಮ ಬಗ್ಗೆ ವಿಶ್ವಾಸವಿಡೋಣ. ನಾನು ಏಕೆ ಹೇಳುತ್ತಿದ್ದೇನೆಂದರೆ, ಜಮೀನು ಪಡೆದುಕೊಂಡಿರುವ ವ್ಯಕ್ತಿಗಳು ಯಾರಿದ್ದಾರೋ, ಅವರ್ಯಾರೂ ಕೂಡ ಸ್ಥಳೀಯರಲ್ಲದೆ, ಹೊರಗಡೆಯಿಂದ ಬಂದವರಾಗಿರುವುದರಿಂದ, ಅದಕ್ಕೋಸ್ಕರವೇ ನಾನು ರಾಜಕೀಯ ಪುಢಾರಿಯ ಚೀಲ ಮತ್ತು ಬಾಲ ಎಂದು ಹೇಳಿದ್ದುದು. ನಿಮ್ಮ ಅಧಿಕಾರಾವಧಿಯಲ್ಲಾದರೂ ಒಳ್ಳೆಯ ಕೆಲಸವಾಗಲಿ ಮತ್ತು ನಿಜವಾದ ಫಲಾನುಭವಿಗಳಿಗೆ ಆಗಬೇಕಾದಂಥ ಜಮೀನು ಸಿಗದೇ ಜಮೀನು ಉಳ್ಳವರಿಗೆ ಸಿಗುತ್ತಿರುವುದರಿಂದ ಹಾಗಾಗದೆ ನಿಜವಾದ ಫಲಾನುಭವಿಗಳಿಗೆ ಜಮೀನು ಸಿಗಲೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಇದರ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಾವು ತಿಳಿಸಿರುವುದರಿಂದ, ನಾನು ಮತ್ತೊಮ್ಮೆ ಸದರಿ ಪ್ರಶ್ನೆಯನ್ನು ಕೇಳುವುದಕ್ಕೆ ತಾವು ಅವಕಾಶ ಕೊಡುವುದಿಲ್ಲವೆಂದು ನಂಬುತ್ತೇನೆ.

ಶ್ರೀ ರಮೇಶ ಸಿ. ಜಿಗಜಿಣಗಿ :- ಉಪಾಧ್ಯಕ್ಷರೇ, ನಾನು ಒಂದು ಮಾತನ್ನು ಹೇಳುತವುದಕ್ಕೆ ಇಷ್ಟಪಡುತ್ತೇನೆ. ನಾನು ಮಂತ್ರಿಯಾಗಿರುವ ತನಕ ಚೀಲ, ಬಾಲಗಳಿಗೆ ಈ ರೀತಿ ಅವಕಾಶ ಕೊಡುವುದಿಲ್ಲವೆಂದು ಭರವಸೆ ನೀಡುತ್ತಾ, ತಾವು ಕೇಳಿರುವ ಮಾಹಿತಿಯನ್ನು ಕೊಟ್ಟು ಕಳುಹಿಸಿ ಕಾನೂನಿನ ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವುದಾಗಿ ತಿಳಿಸುತ್ತೇನೆ.

ವಿಷಯ :- ಮಾಗಡಿ ತಾಲ್ಲೂಕಿನಲ್ಲಿ ಕೆ.ಎಸ್.ಆರ್.ಟಿ.ಸಿ.ಯ ಬಸ್ ಡಿಪೋ ಸ್ಥಾಪನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 232 (1318)

ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾಗಡಿ ತಾಲ್ಲೂಕಿನಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ಘಟಕವನ್ನು ಸ್ಥಾಪಿಸುವ ಯೋಜನೆ ಸರ್ಕಾರಕ್ಕಿದೆಯೇ ; ಇದ್ದರೆ ಯಾವಾಗ ಸ್ಥಾಪಿಸಲಾಗುವುದು ಮತ್ತು ಎಲ್ಲಿ?